**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**Spl.C. (NDPS) 9./2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಪ್ರಸಾದ್ ಎಂ |
| ತಂದೆಯ/ಗಂಡನ ಹೆಸರು | : | ವೀರಭದ್ರಯ್ಯ ಎಂ |
| ವಯಸ್ಸು | : | 45 ವರ್ಷ |
| ಉದ್ಯೋಗ | : | P.I. Holehonnur P.S. |
| ವಾಸ ಸ್ಥಳ | : | Holehonnuru. Shivamogga |

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 1

ದಿ: 22-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ದಿನಾಂಕೀ 14-01-2011 ರಿಂದ 10.01.2021 ರ ವರಗೆ ಹರಿಹರ ವೃತ್ತ ಕಚೇರಿಯಲ್ಲಿ ವೃತ ನಿರೀಕ್ಷಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ದಿನಾಂಕಃ 12.09.2020 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಕಚೆರೀಯಲ್ಲಿದ್ದಾಗ ಹರಿಹರ ಮತ್ತು ಶಿವಮೊಗ್ಗ ರಸ್ತೆಯ ಭರಣಿ ಹೋಟೆಲ್ ಮುಂಭಾಗದಲ್ಲಿ ಯಾರೋ ಮೂರು ಜನ ಅನುಮಾನಸ್ಪದವಾಗಿ ಗಾಂಜಾ ಸೊಪ್ಪನ್ನು ಮಾರಾಟ ಮಾಡುತ್ತಿರುವುದಾಗಿ ಖಚಿತ ಮಾಹಿತಿ ಬಂದಿತ್ತು. ಸದರಿ ಮಾಹಿತಿಯನ್ನು ಪರೀಶೀಲೀಸಿ, ಹರಿಹರ ಗ್ರಾಮಾಂತರ ಪೋಲೀಸ್ ಠಾಣೆ ಯ ದಿನಚರಿಯಲ್ಲಿ ಮಾಹಿತಿಯನ್ನು ನಮೂದು ಮಾಡಿ ಮತ್ತು ಈ ದಿನ ಪ್ರಕರಣವನ್ನು ದಾಖಲಿಸಲು ಮತ್ತು ದಾಳಿ ಮಾಡಲು ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ಮಾಹಿತಿ ತಿಳಿಸಿ ಅನುಮತಿ ಪಡೆದುಕೊಂಡಿರುತ್ತೇವೆ.

2. ನಂತರ ಪ್ರಕರಣದ ತನಿಖೆಯನ್ನು ಕೈಗೊಂಡು 2 ಪಂಚರನ್ನು ಬರಮಾಡಿಕೊಂಡು ಹಾಗೂ ತಹಶೀಲ್ದಾರ್ ಹರಿಹರ ತಾಲ್ಲೂಕು/ ಚಾಸಾ-4 ರವರಿಗೆ ಪತ್ರಾಂಕಿತ ಅಧಿಕಾರಿಯಾಗಿ ದಾಳಿ ನಡೆಸಲು ಅನುವುತಿಯನ್ನು ಪಡೆದುೊಂಡಿರುತ್ತೇವೆ. ಅದೇ ದಿನ ಮದ್ಯಾಹ್ನ 12-00 ಗಂಟೆಗೆ ಠಾಣಾ ಅಧಿಕಾರಿಗಳು ಹರಿಹರ ಗ್ರಾಮಾಂತರ ಪೋಲೀಸ್ ಠಾಣೆ ಗೆ ಗಾಂಜಾ ಮಾರಾಟ ಮಾಡುವ ಬಗ್ಗೆ ಮಾಹಿತಿ ಇದ್ದನ್ನು ವರದಿ ನೀಡಿರುತ್ತೇನೆ ಹಾಗೂ ಪ್ರಕರಣವನ್ನು ದಾಖಲಿಸಲು ದೂರು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.-17 ಎಂದು ಗುರುತಿಸಲಾಯಿತು. ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.-17(ಎ) ಎಂದು ಗುರುತಿಸಲಾಯಿತು. ಎಸ್ ಪಿ ರವರಿಗೆ ನೀಡಿದ ಮಾಹಿತಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.- 18 ಎಂದು ಗುರುತಿಸಲಾಯಿತು. ನಗರಸಬೆಯವರಿಗೆ ಪಂಚರನ್ನು ಕಳುಹಿಸಿಕೊಡಲು ನಾವು ಒಂದು ಪತ್ರವನ್ನು ಬರೆಯಲಾಗಿತ್ತು. ಪಂಚರಿಗೆ ನಾನು ಕೊಟ್ಟಿದ್ದು ನೋಟೀಸು ಈಗಾಗಲೇ ನಿ.ಪಿ.-1 ಎಂದು ಗುರುತಿಸಲಾಗಿದೆ ಅದರಲ್ಲಿನ ನನ್ನ ಸಹಿಯನ್ನು ನಿ.ಪಿ.- 1(ಸಿ) ಎಂದು ಗುರುತಿಸಲಾಯಿತು.

3. ಅದೇ ದಿನ ಮದ್ಯಾಹ್ನ ಪಂಚರಾದ ಚಾಸಾ-2 ಮತ್ತು 3 ರವರಿಗೆ ಹಾಗೂ ಚಾಸಾ-4 ರವರು ನಮ್ಮ ಕಚೇರಿಗೆ ಹಾಜರಾಗಿದ್ದರು, ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪ್ರಕರಣವನ್ನು ತನಿಖೆಗೆ ಮುಂದುವರೆಸಲು ಸಹಕರಿಸಲು ನೋಟೀಸನ್ನು ಜಾರಿ ಮಾಡಿರುತ್ತೇನೆ. ನಂತರ ಇಲಾಖಾ ಸಿಬ್ಬದಿಗಳಾದ ಚಾಸಾ-5 ರಿಂದ 13 ರವರವರೊಂದಿಗೆ ದಾಳಿಗಾಗಿ ಬೇಕಾಗಿರುವಂತಹ ಸಲಕರಣೆಗಳಾದ ತೂಕದ ಯಂತ್ರ, ಲ್ಯಾಪ್ ಟಾಪ್ ಗಳನ್ನು ಸರ್ಕಾರಿ ಜೀಪಿನಲ್ಲಿ ತೆಗೆದುಕೊಂಡು ಎಲ್ಲರು ಹೊರಟೆವು. ಇಂಡಿಯನ್ ಡಾಬಾ ಬಳಿ ಎಲ್ಲಾ ಸಿಬ್ಬಂದಿಗಳು ಪರಸ್ಪರ ಅಂಗಶೋಧನೆ ಮಾಡಿಕೊಂಡು ನಮ್ಮಲ್ಲಿ ಯಾವುದೇ ಮಾದಕ ವಸ್ತುಗಳು ಇಲ್ಲ ಅಂತ ಖಚಿತ ಮಾಡಿಕೊಂಡು ಅಲ್ಲಿಂದ ಸ್ವಲ್ಪ ದೂರದಲ್ಲಿ ನಿಂತು ಭರಣಿ ಮುಂಭಾಗ ನೋಡಲಾಗಿ ಯಾರೋ 3 ಜನ ಒಂದು ಆಟೋ ಸಮೇತ ನಿಂತಿರುವುದು ಕಂಡು ಬಂದಿರುತ್ತದೆ. ಸದರಿ ಮೂವರ ಬ್ಯಾಗ್ ಗಳನ್ನು ಹಾಕಿಕೊಂಡಿರುತ್ತಾರೆ. ನಂತರ ಸಿಬ್ಬಂದಿಯವರ ಸಹಾಯದಿಂದ ಸುತ್ತುವರೆದು

ಹಿಡಿದುಕೊಂಡು ವಿಚಾರಿಸಲಾಗಿ ತಮ್ಮ ಹೆಸರು ರಾಹುಲ್ , ಮಲ್ಲಿಕಾರ್ಜುನ ಮತ್ತು ಪ್ರಮೋದ್ ಅಂತ ತಿಳಿಸಿದರು. ತಮ್ಮ ಇರುವಿಕೆ ಬಗ್ಗೆ ವಿಚಾರಿಸಿದಾಗ ಅವರು ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕಿನವರು ಎಂದು ತಿಳಿಸಿದರು, ಸಮರ್ಪಕವಾಗಿ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ ಪಂಚರು ಹಾಗೂ ಶಹಶೀಲ್ದಾರ್ ರವರ ಸಮಕ್ಷಮ ಅವರ ಬ್ಯಾಗಿನಲ್ಲಿ ಏನು ಇದೆ ಎಂದು ವಿಚಾರಿಸಲಾಗಿ ಹಾಗೂ ಚಾಸಾ-4 ರವರು ಆ ಮೂವರಿಗೆ ಅಂಗ ಶೋಧನೆ ಮಾಡುವ ಬಗ್ಗೆ ಒಪ್ಪಿಗೆಯನ್ನು ವಿಚಾರಿಸಿದರು ಆ ಮೂವರು ಒಪ್ಪಿಗೆ ನೀಡಿದರು, ಆದ್ದರಿಂದ ಚಾಸಾ-4 ರವರು ಅವರಿಗೆ ನೋಟೀಸು ನೀಡಿದರು. ಈಗ ಆ ನೋಟೀಸನ್ನು ನೋಡುತ್ತಿದ್ದು ಅವುಗಳು ಈಗಾಗಲೇ ನಿ.ಪಿ.- 13 ರಿಂದ 15 ಎಂದು ಗುರುತಿಸಲಾಗಿದೆ. ನಂತರ ಆ ಮೂವರ ಪೈಕಿ ರಾಹುಲ್ ಎಂಬುವವನ ಹತ್ತಿರ ಇದ್ದ ಪಾಸ್ಟ್ ಟ್ರಾಕ್ ಹೆಸರಿನ ಬ್ಯಾಗನ್ನು ಪರೀಶೀಲೀಸಿದಾಗ ಅದರಲ್ಲಿ ಒಂದು ಪ್ಲಾಸ್ಟಿಕ್ ಕವರ್ ಇದ್ದು ಅದರಲ್ಲಿ ಸೊಪ್ಪಿನಂತಹ ಒಂದು ವಸ್ತು ಕಂಡುಬಂದಿತ್ತು ಹಾಗೂ ಅದು ಘಾಟು ವಾಸನೆ ಬರುತ್ತಿತ್ತು. ಸೂಕ್ಷ್ಮವಾಗಿ ಪರೀಶೀಲಿಸಲಾಗಿ ಅದರಲ್ಲಿ ಹೂವು, ಮೊಗ್ಗು ಮತ್ತು ಸೊಪ್ಪು ಕಂಡು ಬಂದಿತ್ತು ಆದ್ದರಿಂದ ಅದು ಗಾಂಜಾ ಸೊಪ್ಪು ಅಂತ ಕಂಡುಕೊಳ್ಳಲಾಯಿತು. ನಂತರ ನಮ್ಮೊದಿಗೆ ಇದ್ದ ತೂಕದ ಯಂತ್ರದಲ್ಲಿ ಆ ಸೊಪ್ಪನ್ನು ಪಂಚರ ಸಮಕ್ಷಮ ತೂಕ ನೀಡಿ ನೋಡಿದಾಗ ಅದು ಒಟ್ಟು 2 ಕೆ ಜಿ 45 ಗ್ರಾಂ ತೂಕ ಇತ್ತು. ನಂತರ ಅದನ್ನು ಗಾಂಜಾ ಸೊಪ್ಪನ್ನು ಬಿಳಿ ಚೀಲದಲ್ಲಿ ಹಾಕಿ ಅದಕ್ಕೆ ದಾರವನ್ನು ಕಟ್ಟಿ BB ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ ಕ್ರಮ ಸಂಖ್ಯೆ1 ಎಂದು ಗುರುತಿಸಲಾಯಿತು.

4. ನಂತರ 2 ನೇ ವ್ಯಕ್ತಿಯಾದ ಮಲ್ಲಿಕಾರ್ಜುನರವರ ಬಳಿ ಇದ್ದ ಬೂದುಬಣ್ಣದ ಬ್ಯಾಗ್ ಇದ್ದು ಅದನ್ನು ಪರೀಶೀಲಿಸಿದಾಗ ಖಾಕಿ ಬಣ್ಣ ಗಂ ಟೇಪ್ ನಿಂದ ಸುತ್ತಲ್ಪಟ್ಟ ಅರೆಬರೆ ಒಣಗಿದ ಸೊಪ್ಪು ಕಂಡು ಬಂದಿದ್ದು, ಅದು ಕೂಡ ಘಾಟು ವಾಸನೆಯಿಂದ ಕೂಡಿದ್ದು, ಅದರಲ್ಲಿ ಹೂವು, ಮೊಗ್ಗು ಮತ್ತು ಸೊಪು್ಪ ಇದ್ದು, ಇದನ್ನು ಗಾಂಜಾ ಸೊಪ್ಪು ಎಂದು ಖಚಿತಪಡಿಸಿಕೊಳ್ಳಲಾಯಿತು. ನಂತರ ನಮ್ಮೊದಿಗೆ ಇದ್ದ

ತೂಕದ ಯಂತ್ರದಲ್ಲಿ ಆ ಸೊಪ್ಪನ್ನು ಪಂಚರ ಸಮಕ್ಷಮ ತೂಕ ನೀಡಿ ನೋಡಿದಾಗ ಅದು ಒಟ್ಟು 2 ಕೆ ಜಿ 40 ಗ್ರಾಂ ತೂಕ ಇತ್ತು. ನಂತರ ಅದನ್ನು ಗಾಂಜಾ ಸೊಪ್ಪನ್ನು ಬಿಳಿ ಚೀಲದಲ್ಲಿ ಹಾಕಿ ಅದಕ್ಕೆ ದಾರವನ್ನು ಕಟ್ಟಿ BB ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ ಕ್ರಮ ಸಂಖ್ಯೆ2 ಎಂದು ಗುರುತಿಸಲಾಯಿತು.

5. ನಂತರ 3 ನೇ ವ್ಯಕ್ತಿಯಾದ ಪ್ರಮೋದ್ ರವರನ್ನು ಚಾಸಾ-4 ರವರು ಪರೀಶಿಲೀಸಿದಾಗ ಅವರ ಪ್ಯಾಂಟಿನ ಬಲ ಜೆಬಿನಲ್ಲಿ 11 ಸಣ್ಣ ಸಣ್ಣ ಪ್ಲಾಸ್ಟಿಕ್ ಕವರ್ ಗಳು ಇದ್ದು ಅವುಗಳಲ್ಲಿ ಹೂವು, ಮೊಗ್ಗು ಬೀಜಗಳಿದ್ದ, ಗಾಂಜಾ ಸೊಪ್ಪು ಕಂಡು ಬಂದಿತ್ತು. ನಂಸರ ಈ ಪ್ಯಾಕೇಟ್ ಗಳನ್ನು ಯಾಕೆ ಇಟ್ಟುಕೊಂಡಿರುವುಹಿದಾಗಿ ವಿಚಾರಿಸಿದಾಗ ಅವರು ಗಾಂಜಾ ಮಾರಾಟ ಮಾಡುವ ಸಲುವಾಗಿ ತಂದಿರುತ್ತೇವೆ ಎಂದು ಹೇಳಿದರು. ಸದರಿ 11 ಕವರ್ ಗಳಲ್ಲಿರುವ ಗಾಂಜಾವನ್ನು ತೂಕ ಮಾಡಿದಾಗ ಒಟ್ಟು 80 ಗ್ರಾಂ ಆಗಿರುತ್ತದೆ. ನಂತರ 11 ಕವರ್ ಗಳನ್ನು ಬಿಳಿ ಚೀಲದಲ್ಲಿ ಕಟ್ಟಿ BB ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಿ ಕ್ರಮ ಸಂಖ್ಯೆ3 ಎಂದು ಗುರುತಿಸಲಾಯಿತು. ನಂತರ ಪ್ರಮೋದ್ ರವರ ಎಡ ಜೇಬನ್ನು ಪರೀಶಿಲೀದಾಗ ಸಣ್ಣ ಸಣ್ಣ 23 ಖಾಲಿ ಕವರ್ ಗಳು ಕಂಡು ಬರುತ್ತವೆ. ಇವುಗಳನ್ನು ಹಾಗೂ 2 ಬ್ಯಾಗ್ ಗಳನ್ನು ಪ್ರತ್ಯೇಯಕವಾಗಿ ಬಿಳಿ ಚಿಲದಲ್ಲಿ ಕಟ್ಟಿ BB ಎಂಬ ಅಕ್ಷರದಿಂದ ಅರಗಿನಿಂದ ಸೀಲು ಮಾಡಲಾಯಿತು. ನಂತರ ಎಲ್ಲಾ ಬಿಳಿ ಚೀಲಗಳಿಗೆ ಪಂಚರು ಮತ್ತು ಚಾಸಾ-4 ರವರ ಮತ್ತು ನಮ್ಮ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು.

6. ನಂತರ ಅಲ್ಲೆ ಇದ್ದ ಆಟೋವನ್ನು ಪರೀಶಿಲಿಸಿದ್ದು ಅದರ ಬಗ್ಗೆ ವಿಚಾರಿಸಿದಾಗ ಆ ಮೂವರು ವ್ಯಕ್ತಿಗಳು ಗಾಂಜಾ ಮಾರಾಟ ಮಾಡಲು ಆಟೋ ತಂದಿರುವುದಾಗಿ ಹೇಳಿರುತ್ತಾರೆ. ಆ ಮೂವರು ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು 3 ಇರುತ್ತಾರೆ 2 ನೇ ಆರೋಪಿತರನ್ನು ಗುರುತಿಸಲು ಆರೋಪಿ ಪರ ವಕೀಲರು ಗುರುತಿಸಲು ಏನೂ ತಕರಾರು ಇಲ್ಲ ಎನ್ನುತ್ತಾರೆ ಸದರಿ ಆಟೋ ಸಂಖ್ಯೆKA14/B-8176 ಇದ್ದು ಬಜಾಜ್

ಕಕಂಪನಿಯದ್ದು ಇರುತ್ತದೆ. ಸದರಿ ಆಟೋವನ್ನು ಮುಂದಿನ ತನಿಖೆಗಾಗಿ ಜಪ್ತು ಮಾಡಲಾಯಿತು. ನಂತರ ಅಮಾನತ್ತು ಮಾಡಿಕೊಂಡ ವಾಹನ ಮತ್ತು ವಶಪಡಿಸಿಕೊಂಡ ಗಾಂಜಾ ಒಟ್ಟು 4 ಕೆ ಜಿ 170 ಗ್ರಾಂ ಇರುತ್ತದೆ. ಅಲ್ಲಿ ಪಂಚನಾಮೆಯನ್ನು ಮಾಡಲಾಯಿತು ಅದು ನಿ.ಪಿ.- 4 ಎಂದು ಇದ್ದು ಅದರಲ್ಲಿ ನನ್ನ ಸಹಿಯನ್ನು ನಿ.ಪಿ.- 4(ಎಫ) ಎಂದು ಗುರುತಿಸಲಾಯಿತು. ಪಂಚನಾವೆ ಸಮಯದಲಿ ತಗೆದ ಪೋಟೋ ನಿ.ಪಿ.- 3 ರಿಂದ 12 ರ ವರೆಗೂ ಇರುತ್ತದೆ. ನಿ.ಪಿ.- 3 ರಲ್ಲಿ ಇರುವ ವಾಹನವನ್ನು ಆ ಸಮಯದಲ್ಲಿ ನಾವು ಜಪ್ತು ಮಾಡಿರುತ್ತೇವೆ. ಅಮಾನತ್ತು ಪಡಿಸಿಕೊಂಡ ವಸ್ತುಗಳು ಎಂದರೆ ಎಂ ಒ 1 ರಿಂದ 7 ಇರುತ್ತವೆ. ನಂತರ ಪಂಚನಾಮೆ ಸಮಯದಲ್ಲಿ ವಶಪಡಿಸಿದ ವಸ್ತುಗಳು, ವಾಹನ ಮತ್ತು ಆರೋಪಿತರೊಂದಿಗೆ ಹರಿಹರ ಗ್ರಾಮಾಂತರ  ಠಾಣೆಗೆ ಹೋಗಿ ಚಾಸಾ-14 ರವರ ಮುಂದೆ ಹಾಜರುಪಡಿಸಿರುತ್ತೇನೆ. ಈ ದಿನ ಈ ಪ್ರಕರಣಕ್ಕೆ ಸಂಬಂಧಿಸಿದ SHD ಕಂಪ್ಯೂಟರೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿ.ಪಿ.- 19 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ .KK ರವರು LADC ಪರ ವಕೀಲರಿಂದ 3 ನೇ ಆರೋಪಿತರ ಪರವಾಗಿ**:

7. ನಿ.ಪಿ.- 17 ರಂತೆ ದೂರು ನೀಡುವ ಪೂರ್ವದಲ್ಲಿ ಯಾವುದೇ ವಸ್ತುಗಳು ಅಮಾನತ್ತು ಆಗಿಲ್ಲ ಎಂದರೆ ನಿಜ. ಪಂಚರು ಯಾರು ಸ್ವತಂತ್ರ ಸಾಕ್ಷಿದಾರರಾಗಿರುವುದಿಲ್ಲ ಎಂದರೆ ಸುಳ್ಳು. ದಾಳಿ ಮಾಡಿದ ಸ್ಥಳ ಅಕ್ಕಪಕ್ಕದವರು ಆ ಪಂಚರು ಆಗಿರುವುದಿಲ್ಲ ಎಂದರೆ ಸಾಕ್ಷಿದಾರರು ಹೇಳುತ್ತಾರೆ ಅವರು ಹರಿಹರದವರು. ದಾಳಿ ನಡೆಸುವ ಕಾಲಕ್ಕೆ ಪಂಚರಾಗಲೀ ಅಥವಾ ತಹಶೀಲ್ದಾರ್ ರವರು ಐಡಿ ಕಾರ್ಡ್ ಧರಿಸಿರಲಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಎಸ್ ಪಿ ಅವರಿಗೆ ನೀಡಿದ ಸ್ವೀಕೃತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಅಂದರೆ ತನಿಖಾದಿಕಾರಿಯವರು ಮಾಡಿರುತ್ತಾರೆ. ನಿ.ಪಿ.- 18 ರಲ್ಲಿ ಸಮಯ ನಮೂದಾಗಿಲ್ಲ ಎಂದರೆ ನಿಜ. ಆದ್ದರಿಂದ ನಿ.ಪಿ.-18 ನ್ನು ನಮಗೆ ಬೇಕಾದ ರೀತಿಯಲ್ಲಿ ಸೃಷ್ಠಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಶೋಧನಾ ಪಟ್ಟಿಯನ್ನು ತಯಾರಿಸಿಲ್ಲ

ಸಾಕ್ಷಿದಾರರು ಹೇಳುತ್ತಾರೆ ಪಂಚನಾಮೆಯಲ್ಲಿ ನಮೂದು ಮಾಡಿದ್ದೇನೆ ಎನ್ನುತ್ತಾರೆ. ನಿ.ಪಿ.- 17 ರಲ್ಲಿ ಅನುಮಾನಿತ ವ್ಯಕ್ತಿಗಳನ್ನು ನಮೂದಿಸಿಲ್ಲ ಎಂದರೆ ನಿಜ. ಅರೆಸ್ಟ್ ಮೆಮೊವನ್ನು ತಯಾರಿಸಿ ಆರೋಪಿತರಿಗೆ ಜಾರಿ ಮಾಡಿಲ್ಲ ಎಂದರೆ ಸುಳ್ಳು. ಆರೋಪಿಗಳ ಸಂಬಂಧಿಕರಿಗೆ ತಿಳಿಸಿದಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಆರೋಪಿತರನ್ನು ದಸ್ತಗಿರಿ ಮಾಡಿದ ಬಗ್ಗೆ ಹಾಗೂ ಗಾಂಜಾ ಸೊಪ್ಪನ್ನು ಅಮಾನತ್ತು ಮಾಡಿದ ಬಗ್ಗೆ ಹಾಗೂ ಎಸ್ ಪಿ ಮತ್ತು ಡಿವೈ ಎಸ್ ರವರಿಗೆ ಮಾಹಿತಿ ತಿಳಿಸಿದ ಬಗ್ಗೆ ಯಾವುದೇ ದಾಖ್ಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಅದು ನನ್ನ ತನಿಖಾ ಬಾಗ ಅಲ್ಲ ಎನ್ನುತ್ತಾರೆ. ನಿ.ಪಿ.- 2 ನ್ನು 1-15 ರಿಂದ 3-15 ರವ ರಗೆ ಮಾಡಲು ಸಾಧ್ಯವಿಲ್ಲ, ಮತ್ತು ಠಾಣೆಯಲ್ಲೇ ತಯಾರಿಸಲಾಯಿತು ಎಂದರೆ ಸುಳ್ಳು. ನಿ.ಪಿ.- 2 ನ್ನು ತಯಾರು ಮಾಡುವ ಸಂದರ್ಭದಲ್ಲಿ ವಿಡಿಯೋ ಗ್ರಫಿ ಮಾಡಿಲ್ಲ. ಸ್ಕೆಚ್ ಸಹಿತ ಅಲ್ಲಿ ತಯಾರಿಸಿಲ್ಲ. ಆ ಸ್ಥಳದಲ್ಲಿ ಇದ್ದ ಸ್ಥಳೀಯ ಸಾಕ್ಷಿದಾರರು ನ್ನು ಕರೆಸಿ ಸಾಕ್ಷಿದಾರರು ಮಾಡಿಲ್ಲ ಎಂದರೆ ಯಾರು ಅಲ್ಲಿ ಇರಲಿಲ್ಲ ಎನ್ನುತ್ತಾರೆ. ಅಮಾನತ್ತು ಮಾಡಿರುವುದಾಗಿ ಹೇಳಿರುವ ಸ್ಥಳ ಹರಿಹರದಿಂದ ಶಿವಮೊಗ್ಗದ ರಾಜ್ಯ ಹೆದ್ದಾರಿ ಆಗಿರುತ್ತದೆ ಎಂದರೆ ನಿಜ.

8. ಹರಿಹರದಿಂದ ಹೊರಟರೆ ಅಲ್ಲಿ ರಸ್ತೆ ಎರಡು ಭಾಗದಲ್ಲಿ ಡಾಬಾಗಳು, ಪೆಟ್ರೋಲ್ ಬಂಕ್ ಗಳು, ಹೋಟೆಲ್ ದಾರಿಯುದ್ದಕ್ಕೂ ಇದೆ ಎಂದರೆ ನಿಜ. ಎಕ್ಕೆಗೊಂದಿ ಕ್ರಾಸ್ ನಿಂದ ಹೊರಟರೆ ಹರಿಹರದ ಎರಡೂ ಭಾಗಗಳಲ್ಲಿ ಮಠಗಳು ಡಾಬಾಗಳು, ಪೆಟ್ರೋಲ್ ಬಂಕ್ ಗಳು, ಹೋಟೆಲ್ ಇವೆ ಅಂದರೆ ನನಗೆ ನೆನಪಿಲ್ಲ. ಅಲ್ಲಿ ಯಾರು ಇರಲಿಲ್ಲ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.- 13 ರಿಂದ 15 ಗಳಲ್ಲಿ

ಅವರ ಹುದ್ದೆ ಮತ್ತು ಸಮಯ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಅವರ ಸಹಿ ಇದೆ ಎನ್ನುತ್ತಾರೆ. ಆರೋಪಿಗಳು ನನ್ನ ಮುಂದೆಯಾಗಲಿ, ಪತ್ರಾಂಕಿತ ಅಧಿಕಾರಿಗಳ ಮುಂದೆ ಅಂಗ ಶೋಧನೆ ಮಾಡಲು ಒಪ್ಪಿಗೆ ನೀಡಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.- 19 ನ್ನು ನಾನು ಈದಿನ ಸಾಕ್ಷಿ ಹೇಳುವ ಕಾಲಕ್ಕೆ ಹಾಜರುಪಡಿಸಿದ್ದೇನೆ ಎಂದರೆ ನಿಜ. ನಿ.ಪಿ.- 19 ರಲ್ಲಿ SHD ದಿನಾಂಕಃ 23.03.2026 ಅಂತ ನಮೂದಾಗಿದೆ ಎಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಅದು ಪ್ರಿಂಟ್ ತೆಗೆದ ದಿನಾಂಕ ಇರಬಹುದು. ಅದು ಪ್ರಿಂಟ್ ತೆಗೆದ ದಿನ ಎಂದು ಹಾಗೂ ನಿ.ಪಿ.-19 ರಂತೆ SHD ಇರುವುದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.- 19 ರ 2 ನೇ ಪುಟದಲ್ಲಿ ಅರ್ಧ ಭಾಗ ಖಾಲಿ ಇದೆ ಎಂದರೆ ನಿಜ. ಉಳಿದ ಯಾವುದೇ ಪುಟಗಳಲ್ಲಿ ಖಾಲಿ ಇರುವುಲ್ಲ ಎಂದರೆ ನಿಜ. ನಿ.ಪಿ.- 19 ಈ ಪ್ರಕರಣಕ್ಕೆ ಸೃಷ್ಠಿ ಮಾಡಿಕೊಂಡ ದಾಖಲೆ ಎಂದರೆ ಸರಿಯಲ್ಲ.

9. ಈ ಪ್ರಕರಣದಲ್ಲಿ 3 ನೇ ಆರೋಪಿ ಯಾವುದೇ ಮುದ್ದೆಮಾಲು ವಶಪಡಿಕೊಂಡಿಲ್ಲ ಎಂದರೆ ಸರಿಯಲ್ಲ. ಹರಿಹರದ ಆರೋಗ್ಯ ಮಾತೆ ಚರ್ಚ್ ಎಂಬುದು ದಕ್ಷಿಣ ಭಾರತದಲ್ಲಿ ತುಂಬಾ ಹೆಸರುಪಡೆದಿರುವ ಜಾಗ ಅಂದರೆ ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ. 3 ನೇ ಆರೋಪಿ ಕ್ರಿಚ್ಚಿಯನ್ ಜನಾಂಗಕ್ಕೆ ಸೇರಿದ್ದು, ಅವನು ಚರ್ಚ್ ನೋಡಲು ಬಂದಿದ್ದವರನ್ನು ಹೆಂಗೊ ಮಾಡಿ ಅವರನ್ನು ಪ್ರಕರಣಕ್ಕೆ ಸಿಗಿಸಬೇಕು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಮಾನತ್ತು ಮಾಡಿಕೊಂಡರುವ ವಸ್ತುಗಳಲ್ಲಿ ಹೂವು ಕಾಂಡ ಮತ್ತು ಬೀಜ ಎಷ್ಟು ಇತ್ತು ಎಂದು ಪ್ರತ್ಯೇಕವಾಗಿ ತೂಕ ಮಾಡಿಲ್ಲ. ಬ್ಯಾಗ್ ಗಳ ತೂಕ ಮಾಡಿಲ್ಲ. ಎಂ ಒ 1 ರಿಂದ 7 ಈ ಪ್ರಕರಣಕ್ಕೆ ಸೃಷ್ಠಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 1 ರಿಂದ 2 ನೇ ಆರೋಪಿಪರ ವಕೀಲರಾದ SML ರವರಿಂದಃ-**

1 ಮತ್ತು 2 ನೇ ಆರೋಪಿತರಿಂದ ಯಾವುದೇ ಮುದ್ದೆಮಾಲನ್ನು ಅಮಾನತ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಜಾತ್ರೆಗೆ ಬಂದಿದ್ದ 3 ಆರೋಪಿಯನ್ನು ಈ ಪ್ರಕರಣಕ್ಕೆ ಸೇರಿಸಲಾಗಿದೆ ಎಂದರೆ ಸುಳ್ಳು. ಆರೋಪಿ ತರಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.